ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 10-07-2018

ಪ್ರಕಟಣೆಯ ಕೃಪೆಗಾಗಿ

ಪ್ರಸ್ತುತ ಶಿಕ್ಷಣವು ಪುಸ್ತಕ ಮತ್ತು ಪರೀಕ್ಷೆ ಆಧಾರಿಕ – ಡಾ. ಎಂ ಪ್ರಭು

ಕೊಳ್ಳೇಗಾಲ : 10-07-2018 : ಪ್ರಸ್ತುತ ದಿನಗಳಲ್ಲಿ ನಮ್ಮ ಶಿಕ್ಷಣವು ಪುಸ್ತಕ ಮತ್ತು ಪರೀಕ್ಷೆ ಆಧಾರಿತವಾಗಿದೆ. ಈ ಕಾರಣದಿಂದಾಗಿ ವಿದ್ಯಾರ್ಥಿ ಸಮೂಹವು ಪ್ರಾಯೋಗಿಕ ಅಪ್ಲಿಕೇಶನ್‌ನ ಕೊರತೆಯನ್ನು ಕಾಣುವಂತಾಗಿದೆ ಎಂದು ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ **"ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ"**ದ ವತಿಯಿಂದ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ್ದ ಗ್ರಂಥಾಲಯ ಬಳಕೆ ಬಗ್ಗೆ ಪರಿಚಯಾತ್ಮಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರಾಚೀನ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಕೃತಿಯ ಮಡಿಲಲ್ಲಿ ವಿದ್ಯಾರ್ಜನೆ ಮಾಡಲಾಗುತ್ತಿತ್ತು. ಆದರೆ ಈಗ ಪ್ರಕೃತಿ ಒಂದು ಬದಿಯಲ್ಲಿದ್ದರೆ ನಾವು ಇನ್ನೊಂದು ಬದಿಯಲ್ಲಿದ್ದೇವೆ. ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯು ವಿಶ್ವಕ್ಕೆ ಮಾದರಿಯಾಗಿತ್ತು. ಜ್ಯೋತಿಷ್ಯಶಾಸ್ತ್ರ, ಗಣಿತಶಾಸ್ತ್ರ, ಅರ್ಥಶಾಸ್ತ್ರ, ವೈದ್ಯಕೀಯಶಾಸ್ತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಾವು ವಿಶ್ವಕ್ಕೆ ಮಹತ್ತರ ಕೊಡುಗೆ ನೀಡಿದ್ದೇವೆ. ಆದರೆ ಇಂದು ನಾವು ಅಂದಿನ ಜ್ಞಾನ ವ್ಯವಸ್ಥೆಯನ್ನು ನೆನಪಿಸುವುದರೊಂದಿಗೆ ತಂತ್ರಜ್ಞಾನಗಳನ್ನು ಸಂಯೋಜನೆಗೊಳಿಸಿ ಶಿಕ್ಷಣ ನೀಡುವ ಮೂಲಕ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೊಳಿಸಬೇಕಿದೆ.

ನಮ್ಮಲ್ಲಿನ ಶ್ರೇಷ್ಠತೆಯನ್ನು ವಿದೇಶಿಗಳು ಅಳವಡಿಸಿಕೊಳ್ಳುತ್ತಿದ್ದರೆ ನಾವು ಜಾಣಕುರುಡರಂತೆ ನಮ್ಮ ತನವನ್ನು ಮರೆತು ಪಾಶ್ಚಾತ್ಯ ವ್ಯವಸ್ಥೆ ಕಡೆ ಒಲಿದಿದ್ದೇವೆ. ಸಿದ್ಧಾಂತ ಮತ್ತು ಪ್ರಾಯೋಗಿಕ ಜ್ಞಾನವನ್ನು ಸಮತೋಲಿತವಾಗಿ ನೀಡುವ ವ್ಯವಸ್ಥೆಗೆ ಒತ್ತು ನೀಡಬೇಕು ಎಂದು ತಿಳಿಸಿದರು.

ಗ್ರಂಥಪಾಲಕರಾದ ಶ್ರೀ ಶ್ರೀನಿವಾಸ್‌ರವರು ಗ್ರಂಥಾಲಯ ಬಳಕೆ ಹಾಗೂ ಗ್ರಂಥಾಲಯದಲ್ಲಿನ ಸೌಲಭ್ಯ ಕಲ್ಪಿಸಿರುವ ಇ-ಸಂಪನ್ಮೂಲ, ಅಂತರ್ಜಾಲ, ಇತ್ಯಾದಿಗಳ ಬಳಕೆ ಬಗ್ಗೆ ವಿವರಣೆ ನೀಡುತ್ತಾ ಗ್ರಾಮೀಣ ಪ್ರದೇಶದ ಕಾಲೇಜಿನಲ್ಲಿ ಇಂತಹ ಅತ್ಯಾಧುನಿಕ ತಂತ್ರಜ್ಞಾನ ಸೌಲಭ್ಯಗಳನೊಳಗೊಂಡ ಗ್ರಂಥಾಲಯವನ್ನು ದೊಡ್ಡ ನಗರಗಳಲ್ಲಿ ಕಾಣಬಹುದಾಗಿದೆ. ಆದರೆ ಜೆಎಸ್‌ಎಸ್ ಮಹಾವಿದ್ಯಾಪೀಠವು ಸ್ಥಾಪಿಸುವ ಶಿಕ್ಷಣ ಸಂಸ್ಥೆಗಳು ಎಲ್ಲೇ ಇದ್ದರೂ ಅತ್ಯಾಧುನಿಕ ಬೆಳವಣಿಗೆಗಳನ್ನು ಹೊಂದಿರುತ್ತವೆ ಎಂದು ತಿಳಿಸುತ್ತ ಗ್ರಂಥಾಲಯ ಸದುಪಯೋಗಪಡಿಸಿಕೊಳ್ಳುವಿಕೆ ಹಾಗೂ ಗ್ರಂಥಾಲಯದಲ್ಲಿ ಕಲ್ಪಿಸಿರುವ ಸೌಲಭ್ಯಗಳಾದ ಇ-ಸಂಪನ್ಮೂಲ, ಗಣಕೀಕೃತ ಪದ್ಧತಿಯ ವಿವಿಧತೆ, ಉತ್ತಮ ಬಳಕೆದಾರರಿಗೆ ಸಿಗುವ ಪ್ರಶಸ್ತಿ ಹಾಗೂ ಪ್ರಯೋಜನಗಳು , ಇತ್ಯಾದಿಗಳ ಬಗ್ಗೆ ವಿದ್ಯಾರ್ಥಿನಿಯರಿಗೆ ಮಾಹಿತಿ ನೀಡಿದರು.

ಪ್ರಾಚಾರ್ಯ ಪ್ರೊ. ಉಮೇಶ ಅಧ್ಯಕ್ಷತೆ ವಹಿಸಿದ್ದರು.

ಕು. ಕಾವ್ಯಎಸ್ ಪ್ರಥಮ ಬಿ.ಎ ರವರು ಸ್ವಾಗತಿಸಿ, ಕು. ರಮ್ಯಾ ಎನ್ ರವರು ವಂದಿಸಿದರು.

**“ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ”**ದ ವತಿಯಿಂದ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಗ್ರಂಥಾಲಯ ಬಳಕೆ ಬಗ್ಗೆ ಪರಿಚಯಾತ್ಮಕ ಕಾರ್ಯಕ್ರಮ. ಚಿತ್ರದಲ್ಲಿ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ.ಎಂ ಪ್ರಭು, ಪ್ರಾಚಾರ್ಯ ಪ್ರೊ. ಉಮೇಶ ಹಾಗೂ ಗ್ರಂಥಪಾಲಕರಾದ ಶ್ರೀ ಶೀನಿವಾಸ್ ರವರನ್ನು ಕಾಣಬಹುದು.




**“ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ”**ದ ವತಿಯಿಂದ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಗ್ರಂಥಾಲಯ ಬಳಕೆ ಬಗ್ಗೆ ಪರಿಚಯಾತ್ಮಕ ಕಾರ್ಯಕಮದಲ್ಲಿ ಸ್ನಾತಕೋತ್ರರ ವಿಭಾಗದ ಮುಖ್ಯಸ್ಥರಾದ ಡಾ. ಎಂ ಪ್ರಭು ಮಾತನಾಡುತ್ತಿರುವುದು. ಚಿತ್ರದಲ್ಲಿ ಪ್ರಾಚಾರ್ಯ ಪ್ರೊ. ಉಮೇಶ ಹಾಗೂ ಗ್ರಂಥಪಾಲಕರಾದ ಶ್ರೀ ಶೀನಿವಾಸ್ ರವರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರು.

